ಬಾಲಿವುಡ್

# ಕತ್ರೀನಾಗೆ ಪುರುಸೊತ್ತಿಲ್ಲ!



ವೈಯಕ್ತಿಕ ಜೀವನದ ಏಳುಬೀಳುಗಳು ಏನೇ ಇರಲಿ, ವೃತ್ತಿಜೀವನದಲ್ಲಿ ಕತ್ರೀನಾ ಕೈಫ್‌ಗೆ ಕೈತುಂಬ ಕೆಲಸವಿದೆ. ಅಮೀರ್ ಖಾನ್ ಅಭಿನಯದ 'ಥಗ್ಸ್ ಆಫ್ ಹಿಂದೂಸ್ತಾನ್' ಚಿತ್ರದಲ್ಲಿ ತನ್ನ ಪಾತ್ರದ ಬಗ್ಗೆ ಕತ್ರೀನಾ ತುಂಬ ನಿರೀಕ್ಷೆ ಇಟ್ಟುಕೊಂಡಿದ್ದಾಳೆ. ಜತೆಗೇ ಶಾರೂಕ್ ಖಾನ್ ಅಭಿನಯದ 'ಝೀರೊ' ಚಿತ್ರದಲ್ಲಿ ನಾಯಕಿ. ಆ ಚಿತ್ರವೂ ಸಾಕಷ್ಟು ಸುದ್ದಿ ಮಾಡುತ್ತಿದೆ. ಈ ಮಧ್ಯೆ ಹಳೆಯ ಸ್ನೇಹಿತ ಸಲ್ಮಾನ್ ಖಾನ್ ಜತೆಗೆ 'ದಬಾಂಗ್ ಟೂರ್'ಗೆ ಬೇರೆ ಕತ್ರೀನಾ ಸಿದ್ಧಳಾಗಿದ್ದಾಳೆ.

ಜೂನ್ 22ರಿಂದ ಸಲ್ಮಾನ್ ಖಾನ್‌ನ ಸ್ಟೇಜ್ ಷೋಗಳ ದಬಾಂಗ್ ಟೂರ್ ಆರಂಭವಾಗಲಿದೆ. 22ರಂದು ಅಮೆರಿಕದ ಮಿನ್ನೆಸೋಟಾದಿಂದ ಶುರುವಾಗಿ ಚಿಕಾಗೊ, ಕ್ಯಾಲಿಫೋರ್ನಿಯಾ, ಡಲ್ಲಾಸ್, ಸ್ಯಾನ್ ಜೋಸ್, ವ್ಯಾಂಕೋವರ್, ವಾಷಿಂಗ್ಟನ್, ನ್ಯೂಯಾರ್ಕ್– ಹೀಗೆ 15 ದಿನಗಳ ಟೂರ್ ಅದು. ಈ ಸ್ಟೇಜ್ ಷೋನಲ್ಲಿ ಸಲ್ಮಾನ್ ಜತೆಗೆ ಮಿಂಚಲಿರುವ ಮುಖ್ಯ ನಾಯಕಿ ಕತ್ರೀನಾ. ಜೊತೆಗೆ ಜಾಕ್ವೆಲಿನ್, ಸೋನಾಕ್ಷಿ, ಡೈಸಿ ಷಾ ಕೂಡಾ ಭಾಗವಹಿಸಲಿದ್ದಾರೆ.



ದಬಾಂಗ್ ಟೂರ್‌ನಲ್ಲಿ ಭಾಗವಹಿಸಲು ಕತ್ರೀನಾ ತೆಗೆದುಕೊಂಡಿರುವ ಸಂಭಾವನೆ 12 ಕೋಟಿ ರೂಪಾಯಿ! ಜಾಕ್ವೆಲಿನ್‌ಗೆ 8 ಕೋಟಿ ನೀಡಿದ್ದರೆ, ಸೋನಾಕ್ಷಿಗೆ 6 ಕೋಟಿಯಂತೆ. ಸಂಭಾವನೆಯಲ್ಲೂ ಕತ್ರೀನಾ ಎಲ್ಲರಿಗಿಂತ ಮುಂದಿದ್ದಾಳೆ.

ಕತ್ರೀನಾ ಮತ್ತು ರಣಬೀರ್ ಕಪೂರ್ ನಡುವಣ ಗೆಳೆತನಕ್ಕೆ ಕುತ್ತು ಬಂದಿರುವುದು ಇತ್ತೀಚೆಗೆ ಎದ್ದು ಕಾಣುತ್ತಿದೆ. ರಣಬೀರ್ ಜತೆಗೆ ಅಲಿಯಾ ಭಟ್ ಸ್ನೇಹ ಹೆಚ್ಚಾದ ಬಳಿಕ, ಕತ್ರೀನಾ ರಣಬೀರ್‌ಗೆ ಹೆಚ್ಚಾಗಿ ಮಾತಿಗೆ ಸಿಗುತ್ತಿಲ್ಲವಂತೆ. ಕಳೆದ ವಾರ ರಣಬೀರ್ ತಾಯಿ ನೀತು ಕಪೂರ್ ಜತೆಗೆ ಒಂದೆಡೆ ಆಕಸ್ಮಿಕವಾಗಿ ಭೇಟಿಯಾಗುವ ಸಂದರ್ಭ ಬಂದಾಗ, ಕತ್ರೀನಾ ಅದನ್ನು ಬುದ್ಧಿವಂತಿಕೆಯಿಂದ ತಪ್ಪಿಸಿಕೊಂಡ ಸುದ್ದಿಯೂ ಬಂದಿದೆ.

ದಬಾಂಗ್ ಟೂರ್‌ಗೆ ಮುಂಬೈಯ ಜನಪ್ರಿಯ ಸ್ಪೋರ್ಟ್ಸ್ ಬಾರ್ ಒಂದರಲ್ಲಿ ಕತ್ರೀನಾ ಪ್ರಾಕ್ಟೀಸ್ ನಡೆಸುತ್ತಿದ್ದಳು. ಅದೇ ಬಿಲ್ಡಿಂಗ್‌ನಲ್ಲಿರುವ ಗ್ಯಾಸ್ಟ್ರೋ ಪಬ್‌ನಲ್ಲಿ ನೀತೂ ಕಪೂರ್ ಗೆಳತಿಯರ ಜತೆಗೆ ಊಟಕ್ಕೆ ಕುಳಿತಿದ್ದರಂತೆ. ಇಬ್ಬರೂ ತಮ್ಮ ಕೆಲಸ ಮುಗಿಸಿ ಒಂದೇ ಸಮಯಕ್ಕೆ ಹೊರಕ್ಕೆ ಲಿಫ್ಟ್ ಬಳಿ ಬಂದಿದ್ದಾರೆ. ಆದರೆ ನೀತೂ ಅವರನ್ನು ದೂರದಿಂದಲೇ ನೋಡಿದ ಕತ್ರೀನಾ ತಕ್ಷಣ ವಾಪಸ್ ತಿರುಗಿ ಸ್ಪೋರ್ಟ್ಸ್ ಬಾರ್ ಒಳಹೊಕ್ಕಿದ್ದಾಳೆ.

ರಣಬೀರ್ ಜತೆಗಿನ ಸ್ನೇಹ ಕಿತ್ತುಹೋಗುತ್ತಿರುವ ದಿನಗಳಲ್ಲಿ ಮತ್ತೆ ಹಳೆಯ ಗೆಳೆಯ ಸಲ್ಮಾನ್ ಜೊತೆಗೆ ಕತ್ರೀನಾ ನಿಕಟತೆ ಹೆಚ್ಚಿದೆ ಎನ್ನುವ ಸುದ್ದಿಯೂ ಇದೆ. ಕತ್ರೀನಾ ಮಾತ್ರ ಈ ಸುದ್ದಿಗಳ ಕಡೆಗೆ ಹೆಚ್ಚು ಗಮನ ಕೊಡದೆ, ವೃತ್ತಿಜೀವನದತ್ತಲೇ ದೃಷ್ಟಿ ಕೇಂದ್ರೀಕರಿಸಿದ್ದಾಳಂತೆ. ಕತ್ರೀನಾ ಜತೆಗೆ ಒಂದು ಕಾಲದಲ್ಲಿ 'ನಂಬರ್ ಒನ್' ಸ್ಥಾನಕ್ಕೆ ಪೈಪೋಟಿ ನಡೆಸುತ್ತಿದ್ದ ಹೀರೋಯಿನ್‌ಗಳೆಲ್ಲ ತೆರೆಯ ಮರೆಗೆ ಸರಿಯುತ್ತಿದ್ದರೂ, ಕತ್ರೀನಾ ಮಾತ್ರ ಇನ್ನೂ ಬೇಡಿಕೆ ಉಳಿಸಿಕೊಂಡಿರುವುದು ಕುತೂಹಲದ ಸಂಗತಿಯೇ.

■ ಬಿಂದು